ಎರ್ನಾಕುಲಂಗಳಲ್ಲಿ ಯಾರಿಗೂ ತಿಳಿಯದ ವಿಷಯವೇನಲ್ಲ. ಆದರೆ ಬೇರೆಯವರಂತೆ ನೀನು ವಿಶ್ವಾಸದ್ರೋಹಿ ಅಲ್ಲವೆಂಬುದನ್ನು ಕೂಡಾ ಎಲ್ಲರೂ ಅರಿತುಕೊಂಡಿದ್ದಾರೆ...' ಎಂದಿದ್ದಳು.

ಭಗವಾನ್ ಕುಟ್ಟಿ ಕಾರ್ತಿಕೇಯನ್ ಮಾಪಿಳ್ಳೈ ಬಳಿ ಹೋಗಿ ಆತನ ರೆಟ್ಟೆಯನ್ನು ಹಿಡಿದು ಕರೆದುಕೊಂಡು ಬಂದು ಕೆ.ಎಮ್. ನಯ್ಯಾರ್ ಮುಂದೆ ನಿಲ್ಲಿಸಿದ್ದ. ಕಾರ್ತಿಕೇಯನ್ ಮಾಪಿಳ್ಳೈ 'ಅಯ್ಯಾ ಕೆ.ಎಮ್. ನಾನೇನು ಸುಳ್ಳು ಮಾತನಾಡಿದೆನಾ ಹೇಳು. ನಾನು ಅನ್ಯಾಯವನ್ನು ಖಂಡಿಸುತ್ತೇನೆ, ಪ್ರತಿಭಟಿಸುತ್ತೇನೆ ವಿನಃ ಯಾರಿಗಾದರೂ ಎಂದಾದರೂ ತೊಂದರೆ ಮಾಡಿದ್ದೀನಾ ಹೇಳು. ನಿನ್ನ ವಿರುದ್ಧ ಕೂಡಾ ಎಷ್ಟು ಬಾರಿ ಎದುರಿಗೇ ವಾಗ್ದಾಳಿ ಮಾಡಿಲ್ಲ. ಮನುಷ್ಯರಲ್ಲಿ ಬದಲಾವಣೆಯ ಮೂಲಕ ಮಾನವೀಯತೆಯನ್ನು ಚಿಗುರಿಸೋದು ನನ್ನ ಗುರಿ. ಯಾವೊತ್ತಾದರೂ ಹೋರಾಟವನ್ನು ದುಡ್ಡು ಸಂಪಾದನೆ ಮಾಡಲು ಬಳಸಿಕೊಂಡಿದ್ದೀನಾ? ಹಾಗೇನಾದರೂ ಇದ್ದಿದ್ದರೆ ನಾನೇಕೆ ಬರಿಮೈನಲ್ಲಿ ತಿರುಗಾಡಬೇಕಾಗಿತ್ತು. ಐದು ವರ್ಷಗಳ ಹಿಂದೆ ಕೊಲ್ಲಂನ ಪರವೂರ್ ಪುಟ್ಟಿಂಗಲ್ ದೇವಳದಲ್ಲಿ ಪಟಾಕಿ ಬೆಂಕಿ ದುರಂತದಿಂದ ನೂರಾ ಹನ್ನೊಂದು ಮಂದಿ ಸತ್ತರಲ್ಲ, ಆವಾಗ ಯಾರು ಮೊದಲು ಧ್ವನಿ ಎತ್ತಿದ್ದು ನಿನಗೆ ಗೊತ್ತಲ್ಲ. ಹೋಂ ಮಿನಿಸ್ಟರ್ ರಮೇಶ್ ಚೆನ್ನಿತಾಲನನ್ನು ಕೊರಳುಪಟ್ಟಿ ಹಿಡಿದು ಆ ಬಗ್ಗೆ ತನಿಖೆಗೆ ಒತ್ತಾಯಿಸಿದ್ದು, ಪೊಲೀಸರು ನನ್ನನ್ನು ಲಾಠಿಯಿಂದ ಹೊಡೆದದ್ದು ದೊಡ್ಡ ಸುದ್ದಿಯಾಗಲಿಲ್ಲವಾ? ಆವೊತ್ತು ನೀನೆ ತಾನೆ ನನಗೆ ಬೇಲ್ ಕೊಡಿಸಿದ್ದು. ದೇವಸ್ಥಾನಗಳಲ್ಲಿ ಪಟಾಕಿ ಸ್ಟಾಕ್ ಮಾಡಬಾರದೆಂದು, ಪಟಾಕಿ ಹಚ್ಚಬಾರದೆಂದು ಸರ್ಕಾರದ ಆದೇಶ ಹೊರಡಿಸಲು ನಾನೆಷ್ಟು ಶ್ರಮಪಟ್ಟೆ ನಿನಗೆ ಗೊತ್ತೇ ಇದೆ. ಪಟಾಕಿ ವ್ಯಾಪಾರಿಗಳೊಂದಿಗೆ ನಾನು ರಾಜಿ ಮಾಡಿಕೊಂಡಿದ್ದಿದ್ದರೆ ಅವೊತ್ತು ಹತ್ತು ಕೋಟಿ ರೂಪಾಯಿಗಳು ನನ್ನ ಮನೆಯಲ್ಲಿ ಬಂದು ಬೀಳುತ್ತಿತ್ತು. ನೋಟು, ನಾಣ್ಯಗಳನ್ನು ಎಲ್ಲಾದರೂ ತಿನ್ನಲಿಕ್ಕಾಗುತ್ತಾ ಕೆ.ಎಮ್.? ನಾನು ಬರಿ ಸುಟ್ಟು ಉಪ್ಪು ಹಾಕಿಕೊಂಡು ಕೇಜಿ ಬೂತಾಯಿ ಮೀನನ್ನು ಐದು ನಿಮಿಷದಲ್ಲಿ ತಿಂದು ಮುಗಿಸುವುದನ್ನು, ಅರ್ಧ ಬಾಟಲಿ ಮದ್ಯವನ್ನು ನೀರು ಬೆರೆಸಿಕೊಳ್ಳದೆ ಒಂದೇ ಬಾರಿಗೆ ಎತ್ತಿ ಖಾಲಿ ಮಾಡುವುದನ್ನು ನೀನು ಕಂಡಿಲ್ಲವೇನು? ಈ ಜೊಮನ್ ಮುತೆನ್ ಪುರುಕಲ್ ಕೊಟ್ಟಾಯಂನಲ್ಲಿ ಮೂರು ಕಾಂಪ್ಲೆಕ್ಸ್‌ಗಳನ್ನು ಬಾಡಿಗೆಗೆ ಕೊಟ್ಟಿದ್ದಾನೆ. ತಮ್ಮನ ಹೆಸರಲ್ಲಿ ಒಂದು ಸಣ್ಣ ಜ್ಯೂವಲರಿ ಶಾಪ್ ತೆರೆದಿದ್ದಾನೆ. ಕಂಜಿರಪಿಲ್ಲಿಯಲ್ಲಿ ನಲವತ್ತು ಎಕರೆ ರಬ್ಬರ್ ತೋಟ ಮಾಡಿದ್ದಾನೆ. ಇವನು ಹೋರಾಟಕ್ಕೆ ಇಳಿದಾಗ ನಾನೇ ಅರ್ಧರ್ಧ ಚಹಾ ಕೊಡಿಸಿ, ಸಿಗರೇಟು ಕೊಡಿಸುತ್ತಿದ್ದೆ. **People skills** ಇವನಿಗೆ ಕಲಿಸಿಕೊಟ್ಟವನು ನಾನೇ. ಯಾರೇನಾದರೂ ಅಂದುಕೊಳ್ಳಲಿ, ಈ ಕೇರಳಕ್ಕೆ ಮುಂದಿನ ಮುಖ್ಯಮಂತ್ರಿ ನೀನೇ ತಿಳಿದುಕೊ. ನನ್ನ ಬಾಯಿಂದ ಹೊರಬಿದ್ದ ಮಾತು ಯಾವೊತ್ತೂ ಸುಳ್ಳಾಗುವುದಿಲ್ಲ ಎಂಬುದು ಕೊಟ್ಟಾಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಪ್ರತಿಯೊಬ್ಬರಿಗೂ ಗೊತ್ತಿರುವ ವಿಷಯವೇ. ಅಷ್ಟೇಕೆ, ಆ ಶಬರಿಮಲೆ ಅಯ್ಯಪ್ಪ ಹೂ ಕೊಟ್ಟರೂ ಸುಳ್ಳಾಗಬಹುದೇನೋ ಆದರೆ ಈ ಕಾರ್ತಿಕೇಯನ್ ಬಾಯಿಂದ ಉದುರಿದ ಮಾತು ಯಾವೊತ್ತೂ ಸುಳ್ಳಾಗುವುದಿಲ್ಲ. ನನ್ನ ನಾಲಿಗೆಯಷ್ಟೂ ಅಗಲ ಮಚ್ಚೆ ಹರಡಿಕೊಂಡಿರುವುದು ನಿನಗೆ ತಿಳಿಯದ್ದೇನಲ್ಲ ಕಾರ್ಲ್ ಮಾರ್ಕ್ಸ್...' ಎಂದು ಒಂದೇ ಸಮನೆ ಮಾತನಾಡಿ ನಾಲಿಗೆಯನ್ನು ಹೊರಚಾಚಿದ್ದ. ನಾಲಿಗೆಯಷ್ಟೂ ಮಚ್ಚೆ ಹರಡಿಕೊಂಡಿರುವುದನ್ನು ನಾನು ಅದೇ ಮೊದಲು ಕಂಡಿದ್ದು.

ಅವನ ಮಾತುಗಳನ್ನು ಸಾವಧಾನದಿಂದ ಕೇಳಿಸಿಕೊಂಡ ಕೆ.ಎಮ್. ನಯ್ಯಾರ್, 'ಮಿಸ್ಟರ್ ಕಾರ್ತಿಕೇಯನ್, ನಿನ್ನನ್ನು ಮತ್ತು ಪುರುಕಲ್‌ನಲ್ಲಿ ಇಪ್ಪತ್ತು ವರ್ಷಗಳ ಹಿಂದೆಯೇ ಮುಗಿಸಲು ಪ್ಲಾಟ್ ಮಾಡಿದ್ದೆ. ಮಾಡಿದ ಪ್ಲಾಟ್‌ಗಳನ್ನು ನಾನು ಯಾವತ್ತೂ ಕಂಪ್ಲೀಟ್ ಮಾಡದೆ ಇರುತ್ತಿರಲಿಲ್ಲ. ಆದರೆ ಅವೊತ್ತು ಅಣ್ಣ ಸುಧೀಂದ್ರ ನನ್ನ ಕಾಲಿಡಿದುಬಿಟ್ಟ. ಶತ್ರುವನ್ನು ಒಮ್ಮೆಲೇ ನಾಶಮಾಡುವುದಕ್ಕಿಂತ ಶತ್ರುವನ್ನು ಜೊತೆಯಲ್ಲಿಟ್ಟುಕೊಂಡು ಆಟವಾಡುವದು ಅತ್ಯಂತ ಮಜಾ ಕೊಡುವ ಆಟ. ಅದರಿಂದ ಉಂಟಾಗುವ **conflicts**ನ ಅಲೆಗಳನ್ನು ಎದುರಿಸೋದು ಇದೆಯಲ್ಲಾ, ಅದು ಒಂಥರಾ ಅಫೀಮು ಸೇವಿಸುವುದಕ್ಕಿಂತಲೂ ಮಿಗಿಲು. ಅಂಥ ವೈಬ್ರೇಶನ್ಸ್ ಅರಗಿಸಿಕೊಳ್ಳುವುದನ್ನು ಕಲಿತರೆ ಅಧ್ಯಾತ್ಮವನ್ನೇ ಅರೆದು ಕುಡಿದಂತೆ ಎಂದು ಅಣ್ಣ ಹೇಳಿದ್ದ. ಅಂದಿನಿಂದ ಯಾರನ್ನೂ ನಾನು ಶತ್ರುವೆಂದು ಪರಿಗಣಿಸಲೇ ಇಲ್ಲ. ಆದರೆ ಅಂಥ ವಿದ್ಯೆ ಕಲಿಸಿದ ಅಣ್ಣನೇ ಸೋತು ಹೆಣವಾಗಿ ಮಲಗಿದ್ದಾನೆ. ಈಗ ನೀನು ಮನೆಗೆ ಹೋಗಿ ಮಲಗಿಕೊ. ರಾತ್ರಿಗೆ ಅಣ್ಣನ ಸೋಲನ್ನು ಒಳ್ಳೆ ಪಾರ್ಟಿ ಮಾಡುವುದರ ಮೂಲಕ ಸಂಭ್ರಮಿಸೋಣ...' ಎಂದು ಕಾರ್ತಿಕೇಯನ್ನನ ಭುಜ ತಟ್ಟಿದ್ದರು ಕೆ.ಎಮ್. ನಯ್ಯಾರ್. ಅಷ್ಟರಲ್ಲಿ ಪೊಲೀಸ್ ಆಫೀಸರೊಬ್ಬರು ಕೆ.ಎಮ್. ನಯ್ಯಾರ್ ಬಳಿ ಬಂದು, 'ಸಾರ್, ಸಿಎಂ ಸಾಹೇಬರು ಕರೆಕ್ಟಾಗಿ ಇನ್ನರ್ಧ ಗಂಟೆಗೆ ಇಲ್ಲಿರ್ತಾರಂತೆ' ಎಂದು ಹೇಳಿ ಹೋಗಿದ್ದರು. ಕಾರ್ತಿಕೇಯನ್ ಮಾಪಿಳ್ಳೈನನ್ನು ಕರೆದುಕೊಂಡು ಭಗವಾನ್ ಕುಟ್ಟಿ ಮರೆಯಾಗಿದ್ದ.

ಕೆ.ಎಮ್. ನಯ್ಯಾರರ ಹಿಂದಿನಿಂದ ಸಿಂಧು ಮೆನನ್ ನನ್ನ ಬಳಿ ಬಂದು, 'ನಿಮಗೆ ನಮ್ಮ ಕಾರ್ತಿಕೇಯನ್ ಮಾಪಿಳ್ಳೈನನ್ನು ನೋಡಿ ಆಶ್ಚರ್ಯ ಆಗಿರಬೇಕಲ್ಲ. ನನಗೆ ಬುದ್ಧಿ ತಿಳಿದಾಗಿನಿಂದಲೂ ಒಂದೇ ಒಂದು ಸುಳ್ಳು ಹೇಳಿದವನಲ್ಲ. ಆತನ ಹತ್ತಿರ ಬೈಸಿಕೊಳ್ಳಲು ಇಲ್ಲಿನ ಸುತ್ತಮುತ್ತಲಿನ ಜನ ಹೆದರಿಕೊಳ್ಳುತ್ತಾರೆ. ಅವನು ಹೇಳಿದ್ದು ನಿಧಾನವಾಗಿಯಾದರೂ ಘಟಿಸುತ್ತದೆ. ಅಭಯ ಕೊಲೆಯಾದಾಗ ಮೊದಲು ಬೀದಿಗೆ ಇಳಿದವನೇ ನಮ್ಮ ಕಾರ್ತಿಕೇಯನ್. ಆಮೇಲೆ ಎಲ್ಲರೂ ಪ್ರತಿಭಟನೆಗಿಳಿದು ಅದರ ಬೆನಿಫಿಟ್ ಪಡೆದುಕೊಂಡರು. ಹೆಂಡತಿ ಮೆಫ್ರೀನ್ ಯಾರ ಹಿಂದೆಯೋ ಓಡಿಹೋದ ನಂತರ ಇವನಿಗೆ ತಲೆಕೆಟ್ಟಿದೆಯೆಂದು ಜನ ಮಾತನಾಡಿಕೊಳ್ಳುತ್ತಾರೆ. ಈಗಲೂ ಆಳ ಸಮುದ್ರಕ್ಕೆ ಹೋಗಿ ಅವನಂತೆ ಮೀನು ಹಿಡಿಯುವ ತಾಕತ್ತು ಹರೆಯದ ಯುವಕರಲ್ಲೂ ಇಲ್ಲ. ಫಿಶ್ಶಿಂಗ್‌ಗೆಂದು ಚೆಲ್ಲಂ, ಮರವುಕಾಡು, ಮಲಿಪುರಂ, ಫೋರ್ಟ್ ಕೊಚ್ಚಿನ್ ಮುಂತಾದ ಕಡೆ ಹೋದರೆ ಈಗಲೂ ವಾರಗಟ್ಟಲೆ, ತಿಂಗಳುಗಟ್ಟಲೇ ಫಿಶ್ಶಿಂಗ್ ಮಾಡುತ್ತಾ ಇದ್ದುಬಿಡುತ್ತಾನೆ. ಮತ್ತು ಗಂಡ ಸತ್ತ ಅನೇಕ ಹೆಂಗಸರು ಕಾರ್ತಿಕೇಯನ್‌ಗೆ ಘಮ್ಮನೆಯ ಮೀನು ಹುಳಿ ಮಾಡಿಟ್ಟು ರಾತ್ರಿ ಹೊತ್ತು ತಮ್ಮ ಮನೆಗಳಲ್ಲಿ ಮಲಗಿಸಿಕೊಳ್ಳುತ್ತಾರಂತೆ. ಫೋರ್ಟ್ ಕೊಚ್ಚಿನ್‌ನ ಪ್ಯಾಟ್ರೀಶಿಯ ಎಂಬ ಹೆಣ್ಣು ಗಂಡ ಸತ್ತ ನಂತರ ಹುಟ್ಟಿದ ತನ್ನ ಮಗನ ತಂದೆ ಕಾರ್ತಿಕೇಯನ್ ಮಾಪಿಳ್ಳೈ ಎಂದೇ ಕಾನ್ವೆಂಟ್‌ನಲ್ಲಿ ಬರೆಸಿರುವಳಂತೆ' ಎಂದು ನಕ್ಕಳು. ಮತ್ತು ಯಾರೋ ಮಾತನಾಡಿಸಲು ಬಂದಿದ್ದರಿಂದ ಮೊದಲು ಕುಳಿತಿದ್ದ ತನ್ನ ಜಾಗಕ್ಕೆ ಹೋಗಿದ್ದಳು. ಸತ್ತ ಒಬ್ಬ ವ್ಯಕ್ತಿಯ ಹೆಣದ ಮುಂದೆ ಇವೆಲ್ಲ ವಿಚಿತ್ರ ವಿದ್ಯಮಾನಗಳೆಂಬಂತೆ ನನಗೆ ತೋರಿದ್ದವು.

ಸುಧೀಂದ್ರ ನಯ್ಯಾರರ ಪಾರ್ಥಿವ ಶರೀರದ ದರ್ಶನಕ್ಕಾಗಿ ಬರುತ್ತಿರುವವರ ಸಂಖ್ಯೆ ಜಾಸ್ತಿಯಾಗಿತ್ತು. ಅಳುವ ಮತ್ತು ಸತ್ತ ಸುಧೀಂದ್ರ ನಯ್ಯಾರರ ಗುಣಗಾನ ಮಾಡುತ್ತಾ ಜೋರಾಗಿ ಘೋಷಣೆಗಳನ್ನು ಕೂಗುತ್ತಿದ್ದದ್ದು ಕಿವಿಯನ್ನು ತುಂಬಿಕೊಳ್ಳುತ್ತಿದ್ದವು. ಫೋನ್ ರಿಂಗಾಗಿತ್ತು. ಕಾಕಿಗಡ್ಡ ರಾಘವರೆಡ್ಡಿಯದು. ರಿಸೀವ್ ಮಾಡಿಕೊಳ್ಳಲೋ ಬೇಡವೋ ಎಂಬ ದ್ವಂದ್ವದಲ್ಲಿರುವಾಗಲೇ ರಿಂಗಿಂಗ್ ಸೌಂಡ್ ಕಟ್ ಆಗಿತ್ತು. ನಾನೇ ತಿರುಗಿ ಫೋನ್ ಮಾಡಿದ್ದೆ. 'ಏನ್ ಬ್ರದರ್, ನಿಮ್ಮಣ್ಣ ವಿಕ್ರಮ್ ರೆಡ್ಡಿಯ ಬಾಡಿಯ ಪೋಸ್ಟ್ ಮಾರ್ಟಂ ಮುಗಿದ ಬಳಿಕ ಸಿಬಿಐ ಆಫೀಸಿನ ಬಳಿ ದರ್ಶನಕ್ಕೆ ಇಟ್ಟು ನಾಳೆ ಬೆಳಿಗ್ಗೆ ಸ್ಪೆಷಲ್ ಫ್ಲೈಟ್‌ನಲ್ಲಿ ಬೆಂಗಳೂರಿಗೆ ಕಳಿಸ್ತಾರಂತೆ. ನೀನು ಮಸ್ಸೂರಿಯಿಂದ ಡೈರೆಕ್ಟಾಗಿ ದಿಲ್ಲಿಗೆ ಹೋಗ್ತೀಯ ಅಂತ ತಿಳಿದುಕೊಂಡಿದ್ದೆ, ನೋಡಿದ್ರೆ ಎರ್ನಾಕುಲಂನಲ್ಲಿ ಟೆಂಟ್ ಊರಿದ್ದೀಯ. ಭಗವಾನ್ ಕುಟ್ಟಿಗೆ ಫೋನ್ ಮಾಡಿದ್ದೆ. ನೀನು ಎರ್ನಾಕುಲಂನಲ್ಲಿರೋದು ಅವನೇ ಹೇಳಿದ್ದು. ಹಾಗೆ ನೋಡಿದರೆ ನಿಮ್ಮಣ್ಣನಿಗಿಂತ್ಲೂ ಸುಧೀಂದ್ರ ನಯ್ಯಾರ್ ಹಂಡ್ರೆಡ್ ಪರ್ಸೆಂಟ್ ಉತ್ತಮವಾದ ವ್ಯಕ್ತಿಯೆಂದೇ ಹೇಳಬಹುದು. 'ಬ್ಲಡ್ ಈಸ್ ಥಿಕ್ಕರ್ ದ್ಯಾನ್ ವಾಟರ್' ಎಂಬ ಗಾದೆಯನ್ನು ನೀನು ಸುಳ್ಳು ಮಾಡಿಬಿಟ್ಟೆ ಅನ್ನಿಸ್ತಿದೆ ನನಗೆ. ಸುಂದರವಾದ, ಮಾದಕವಾದ, ಘಮಘಮಿಸುವ ಹೆಣ್ಣು ಖಂಡಿತವಾಗಿಯೂ ಗಾದೆ, ಸಿದ್ಧಾಂತಗಳನ್ನೇ ಅಲ್ಲ ಏನನ್ನಾದರೂ ಬದಲಿಸಬಲ್ಲಳು. ನಾನು ಮೂರು ದಿನ ಬಿಟ್ಟುಕೊಂಡು ಬೆಂಗಳೂರಿಗೆ ಬರುತ್ತೇನೆ. ಸುಧೀಂದ್ರ ನಯ್ಯಾರರ ಸಂಸ್ಕಾರ ಮುಗಿಸಿಕೊಂಡು ಇವೊತ್ತೇ ನೀನು ಬೆಂಗಳೂರಿಗೆ ಹೋಗಬಹುದು. ಅಥವಾ ದಿಲ್ಲಿಗೆ ಹೋಗಿ ವಿಕ್ರಂ ರೆಡ್ಡಿಯ ಹೆಣದ ಜೊತೆ ಬೆಂಗಳೂರಿಗೆ ಹೋಗಬಹುದು. ನನಗಿಂತಲೂ ಹೆಚ್ಚು ವಿವೇಕವುಳ್ಳವನು ನೀನು. **Wisemen always**